**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ 06-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಬಿ ಎನ್ 1 ರಿಂದ 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

3. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಅಧಿಕಾರ ಪತ್ರವನ್ನು ನನ್ನ ತಾಯಿಯವರು ಮಾಡಿಕೊಟ್ಟಿರುತ್ತಾರೆ. ಸದರಿ ಅಧಿಕಾರ ಪತ್ರಕ್ಕೆ ನನ್ನ ತಾಯಿಯವರೇ ಮಾಹಿತಿಯನ್ನು ಕೊಟ್ಟಿರುತ್ತಾರೆ. ನನ್ನ ತಾಯಿಯವರಿಗೆ ಆರೋಗ್ಯ ಸರಿ ಇಲ್ಲದ ಕಾರಣ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿಯವರಿಗೆ ಆರೋಗ್ಯ ಸರಿ ಇಲ್ಲದ್ದಕ್ಕಾಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನ್ನ ತಾಯಿಯವರಿಗೆ ಒಂದು ಕಣ್ಣು ಆಪರೇಷನ್ ಆಗಿದ್ದು, ಒಂದು ಕಣ್ಣು ಸರಿಯಾಗಿ ಕಾಣಿಸುವುದಿಲ್ಲ ಮತ್ತು ಅವರಿಗೆ ಓಡಾಡಲು ಆಗುವುದಿಲ್ಲ. ಅಧಿಕಾರ ಪತ್ರವನ್ನು ನಮ್ಮ ವಕೀಲರ ಕಛೇರಿಯಲ್ಲಿ ಬರೆದುಕೊಟ್ಟಿರುತ್ತಾರೆ. ಸದರಿ ಪತ್ರಕ್ಕೆ ನನ್ನ ತಾಯಿಯವರೊಬ್ಬರೇ ಸಹಿ ಮಾಡಿರುತ್ತಾರೆ. ಸದರಿ ಅಧಿಕಾರ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದೆ. ನನ್ನ ತಾಯಿಯವರು ಸದರಿ ಅಧಿಕಾರ ಪತ್ರದ ಪ್ರಕಾರ ನನಗೆ ನ್ಯಾಯಾಲಯದಲ್ಲಿ ಏನೇನೂ ಮಾಡಬೇಕೆಂದು ಹೇಳಿದ್ದರು ಎಂದು ನನಗೆ ನೆನಪಿಲ್ಲ. ನನ್ನ ತಾಯಿಯವರು ಬಿದ್ದು, ಓಡಾಡಲು ಆಗುತ್ತಿರಲಿಲ್ಲ ಎನ್ನುವ ವಿಷಯವನ್ನು ಅಧಿಕಾರ ಪತ್ರದಲ್ಲಿ ಬರೆದಿದ್ದರು. ಸದರಿ ಅಧಿಕಾರ ಪತ್ರಕ್ಕೆ ನಮ್ಮದು ಸಮ್ಮತಿ ಇದೆ ಎಂದು ಉಳಿದ ವಾದಿಯರು ಸದರಿ ಅಧಿಕಾರ ಪತ್ರಕ್ಕೆ ಸಹಿ ಮಾಡಿಲ್ಲ. ಉಳಿದ ವಾದಿಯರಿಗೆ ಅಧಿಕಾರ ಪತ್ರದ ಬಗ್ಗೆ ಮಾಹಿತಿ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ನಿಮ್ಮ ತಾಯಿಯವರು ಈ ದಾವೆಯನ್ನು ಯಾವ ಕಾರಣಕ್ಕೆ ದಾಖಲು ಮಾಡಿರುತ್ತಾರೆ ಮತ್ತು ದಾವೆ ದಾಖಲು ಮಾಡಲು ಕಾರಣ ಯಾವ ಉಂಟಾಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆಸ್ತಿ ಬೇಕು ಎಂದು ದಾವೆ ಮಾಡಿದ್ದು 10 ವರ್ಷಗಳ ಹಿಂದೆ ಕಾರಣ ಉಂಟಾಯಿತೆಂದು ನುಡಿಯುತ್ತಾರೆ. ದಾವಾಸ್ತಿಯು ಮೂಲತಃ ನಮ್ಮ ಅಜ್ಜಿಯಾದ ಬಸಮ್ಮರವರ ಕಬ್ಜೆಯಲ್ಲಿತ್ತು. ಸದರಿಯವರಿಗೆ ಗಂಡು ಸಂತಾನವಿರಲಿಲ್ಲ ಎಂದರೆ ಸರಿ. ಸದರಿಯವರಿಗೆ 07 ಜನ ಹೆಣ್ಣು ಮಕ್ಕಳು ಇದ್ದು, ಅವರೆಲ್ಲರಿಗೂ ಮದುವೆಯಾಗಿತ್ತು ಎಂದರೆ ಸರಿ. ಸದರಿ 07 ಜನ ಮಕ್ಕಳ ಪೈಕಿ ಬಾಗವ್ವ ಎನ್ನುವವಳು ಬಸಮ್ಮ ಮರಣಹೊಂದುವುದಕ್ಕಿಂತ ಮೊದಲೇ ಮರಣ ಹೊಂದಿದ್ದಳು ಎಂದರೆ ಸರಿಯಲ್ಲ. ಭಾಗವ್ವಳಿಗೆ 03 ಜನ ಮಕ್ಕಳು ಅವರುಗಳೆಂದರೆ ಶಿವಪುತ್ರಪ್ಪ, ಕಲಾವತಿ ಮತ್ತು ಸೋಮಕ್ಕ. ಬಸಮ್ಮಳ ಇನ್ನೊಬ್ಬ ಮಗಳಾದ ಈರವ್ವ 15 ವರ್ಷಗಳ ಹಿಂದೆ ಮೃತಪಟ್ಟಿರುತ್ತಾಳೆ. ಸದರಿ ಈರವ್ವಳಿಗೆ ಮಕ್ಕಳಿದ್ದಾರೆ ಆದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಗಳಲ್ಲಿ ಈರವ್ವಳ ಮಕ್ಕಳಿಗೂ ಹಕ್ಕು ಇದೆ ಎಂದರೆ ಸರಿ.

**5.** ಬಸಮ್ಮಳ ಜೀವಿತ ಅವಧಿಯಲ್ಲಿ ದಾವಾಸ್ತಿಯನ್ನು ಮಾರಾಟ ಮಾಡಿ ತನ್ನ ಎಲ್ಲ ಮಕ್ಕಳಿಗೂ ಹಣ ಹಂಚಿಕೆ ಮಾಡಿದರಾಯಿತು ಎಂದು ಸದರಿ ಆಸ್ತಿಯನ್ನು ಮಾರಾಟಕ್ಕೆ ಇಟ್ಟಿದ್ದಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸದರಿ ಆಸ್ತಿಯು ಮಾರಾಟವಾಗಲಿಲ್ಲ ಎಂದರೆ ಸಾಕ್ಷಿಯು ಮಾರಾಟಕ್ಕೆ ಇಟ್ಟಿಲ್ಲ ಎಂದು ನುಡಿಯುತ್ತಾರೆ. ಬಸಮ್ಮ ಮತ್ತು ಆಕೆಯ ಮಕ್ಕಳು ಸದರಿ ದಾವಾಸ್ತಿಯನ್ನು 1 ರಿಂದ 6 ನೇ ಪ್ರತಿವಾದಿಯರಿಗೆ ಬಾಡಿಗೆಗೆ ಕೊಟ್ಟಿದ್ದರು ಎಂದರೆ ಸರಿ. ಆ ರೀತಿ ಬಾಡಿಗೆ ಕೊಟ್ಟ ವಿಷಯ ನನ್ನ ತಾಯಿಯರಿಗೆ ಇಷ್ಟವಾಗಲಿಲ್ಲ. ಸದರಿಯವರು ಸುಮಾರು 35 ವರ್ಷದಿಂದ ಬಾಡಿಗೆಗೆ ಇದ್ದರು. ಸದರಿಯವರು ಸುಮಾರು ವರ್ಷಗಳಿಂದ ಬಾಡಿಗೆಗೆ ಇದ್ದುದ್ದರಿಂದ ಬಸಮ್ಮ ಮರಣ ಹೊಂದಿದ ನಂತರ

ಆಕೆಯ ಉಳಿದ ಮಕ್ಕಳು ಸದರಿ ದಾವಾಸ್ತಿಯನ್ನು 1 ರಿಂದ 6 ನೇ ಪ್ರತಿವಾದಿಯರಿಗೆ ಮಾರಾಟ ಮಾಡಬೇಕೆಂದು ನಿರ್ಧರಿಸಿದ್ದರು ಎಂದರೆ ಸರಿಯಲ್ಲ. ಆ ರೀತಿ ನಿರ್ಧಾರ ಮಾಡಿದ್ದರಿಂದ ದಿನಾಂಕಃ 29-06-1998 ರಂದು ರೂ.1,80,000/- ಗಳಿಗೆ 1 ರಿಂದ 6 ನೇ ಪ್ರತಿವಾದಿಯರೊಂದಿಗೆ ವಾದಿಯರು ಸಂಚಕಾರ ಪತ್ರ ಮಾಡಿಕೊಂಡು ರೂ. 50,000/- ಗಳನ್ನು ಮುಂಗಡ ಹಣವನ್ನು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ದಿನಾಂಕಃ 29-06-1998 ರಂದು ಆದಂತಹ ಖರೀದಿ ವ್ಯವಹಾರದ ಪ್ರಕಾರ 1 ರಿಂದ 6 ನೇ ಪ್ರತಿವಾದಿಯರ ತಂದೆಯ ಹೆಸರಿಗೆ ನೊಂದಾಯಿತ ಖರೀದಿ ಪತ್ರ ಮಾಡಿಕೊಡಲಿಲ್ಲ ಎಂದರೆ ಸರಿ.

**6.** ಆ ಕಾಲಕ್ಕೆ 1 ರಿಂದ 6 ನೇ ಪ್ರತಿವಾದಿಯರ ತಂದೆ ನನ್ನ ಅಜ್ಜಿ ಮತ್ತು ವಾದಿಯರಿಗೆ ನೋಟಿಸ ಕೊಟ್ಟು ನೊಂದಾಯಿತ ಖರೀದಿ ಪತ್ರ ಮಾಡಿಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಆ ರೀತಿ ನೋಟಿಸ ಕೊಟ್ಟಿದ್ದರೂ ಸಹ 1 ರಿಂದ 6 ನೇ ಪ್ರತಿವಾದಿಯ ತಂದೆಯ ಹೆಸರಿಗೆ ನೊಂದಾಯಿತ ಖರೀದಿ ಪತ್ರ ಮಾಡಿಕೊಡಲಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಅಸಲು ದಾವೆ ಸಂಖ್ಯೆಃ 122/2001 ನ್ನು 1 ರಿಂದ 6 ನೇ ಪ್ರತಿವಾದಿಯರ ತಂದೆ ಹಾವೇರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ವಿಚಾರಣೆ ನಡೆದು ದಿನಾಂಕಃ 23-11- 2010 ಇಂದು ಭಾಗಶಃ ಡಿಕ್ರಿ ಆಯಿತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದ ಮೇಲೆ 1 ರಿಂದ 6 ನೇ ಪ್ರತಿವಾದಿಯ ತಂದೆ ಹಾವೇರಿಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಆರ್ ಎ ನಂ. 30/2011 ನ್ನು ದಾಖಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ

ಮೇಲ್ಮನವಿಯು ದಿನಾಂಕಃ 24-08-2018 ರಂದು ತೀರ್ಪು ಆಗಿದ್ದು, ವಿಚಾರಣಾ ನ್ಯಾಯಾಲಯದ ತೀರ್ಪನು ಎತ್ತಿ ಹಿಡಿದು ಆದೇಶವಾಯಿತು ಎಂದರೆ ಸಾಕ್ಷಿಯು ನಮ್ಮ ತಾಯಿಯ ಪರವಾಗಿ ಆಯಿತು ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿ ಆದೇಶದ ವಿರುದ್ಧ 1 ರಿಂದ 6 ನೇ ಪ್ರತಿವಾದಿಯರ ತಂದೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡದಲ್ಲಿ ಆರ್ ಎಸ್ ಎ ನಂ.100024/2019 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯು ಇವತ್ತಿನವರೆಗೂ ವಿಚಾರಣೆ ಹಂತದಲ್ಲಿ ಇದೆ ಎಂದರೆ ಸರಿ. ಸದರಿ ಮೇಲ್ಮನವಿ ಚಾಲ್ತಿಯಲ್ಲಿರುವ ವಿಚಾರವನ್ನು ಈ ದಾವೆಯಲ್ಲಿ ನನ್ನ ತಾಯಿಯವರು ಹೇಳಿ ಬರೆಯಿಸಿಲ್ಲ.

7. ಇವತ್ತಿನವರೆಗೂ ದಾವಾಸ್ತಿಯಲ್ಲಿ 1 ರಿಂದ 6 ನೇ ಪ್ರತಿವಾದಿಯರ ತಂದೆಯ ಕಾಲದಿಂದಲೂ ಸದರಿಯವರೇ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ. ದಾವಾದ ಆಸ್ತಿಯ ಬಗ್ಗೆ ನನ್ನ ತಾಯಿಯವರು ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯವರು ಈ ನ್ಯಾಯಾಲಯದ ಮುಂದೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆಂದು ಖೊಟ್ಟಿ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ಯಾವುದೇ ಕಾರಣವಿಲ್ಲದಿದ್ದರೂ ಸಹ ಸುಳ್ಳು ಕಾರಣ ಸೃಷ್ಟಿಸಿ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತಾರೆಂದರೆ ಸರಿಯಲ್ಲ. ನನಗೆ ದಾವಾಸ್ತಿಯ ಬಗ್ಗೆ ಮತ್ತು ದಾವಾ ವಸ್ತು ವಿಷಯದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

–ಸಹಿ–

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಹಾವೇರಿ.**